# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಮಗಳೂರು

**ಅಧಿಸೂಚನೆ ಸಂಖ್ಯೆ:03/2025, ದಿನಾಂಕ:06.03.2025**

ವಿಷಯಃ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಮಗಳೂರು ಇಲ್ಲಿ ಸ್ಕ್ಯಾವೆಂಜರ್ ಕೆಲಸಕ್ಕೆ ತಾತ್ಕಾಲಿಕವಾಗಿ 01 ವರ್ಷದ ಅವಧಿಗೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖಃ ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆಃ ಕರಾಕಾಸೇಪ್ರಾಃ61/ ADM/2018, ದಿನಾಂಕಃ 21.07.2018

******

**ಪ್ರಸ್ತಾವನೆಃ**

ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆಃಕರಾಕಾಸೇಪ್ರಾಃ61/ ADM/2018, ದಿನಾಂಕಃ 21.07.2018 ನಿರ್ದೇಶದನ್ವಯ ಚಿಕ್ಕಮಗಳೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ತಾತ್ಕಾಲಿವಾಗಿ 01 ವರ್ಷದ ಅವಧಿಗೆ ಸ್ಕ್ಯಾವೆಂಜರ್ ಕೆಲಸಕ್ಕೆ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 1 | ಸ್ಕ್ಯಾವೆಂಜರ್ | 01 | ರೂ.3,500-00 |

- **ವಿದ್ಯಾರ್ಹತೆಃ**

ಅನ್ವಯವಾಗುವುದಿಲ್ಲ.

- **ಅರ್ಜಿ ಸಲ್ಲಿಸುವ ವಿಧಾನಃ**

ಅಭ್ಯರ್ಥಿಗಳು ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಅರ್ಜಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ಅರ್ಜಿ ನಮೂನೆಯಲ್ಲಿ ತಮ್ಮ ಸಂಪೂರ್ಣ ಮಾಹಿತಿಯನ್ನು ಸೂಕ್ತ ದಾಖಲೆಗಳೊಂದಿಗೆ ಹಾಗೂ ಪಾಸ್‌ಪೋರ್ಟ್ ಅಳತೆ ಇತ್ತೀಚಿನ ಭಾವಚಿತ್ರಗಳೊಂದಿಗೆ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಲಯದ ಆವರಣ, ಚಿಕ್ಕಮಗಳೂರು ಇಲ್ಲಿಗೆ ಕೊನೆಯ ದಿನಾಂಕದೊಳಗಾಗಿ ಅಂದರೆ ದಿನಾಂಕಃ17.03.2025ರೊಳಗಾಗಿ ಸಲ್ಲಿಸತಕ್ಕದ್ದು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

- **ನೇಮಕಾತಿ ವಿಧಾನಃ**

ಸಂದರ್ಶನ ಮತ್ತು ನೈಪುಣ್ಯತೆ ಆಧರಿಸಿ ನೇರ ನೇಮಕಾತಿ.

- **ಷರತ್ತುಗಳುಃ**
- ಸದರಿ ಕೆಲಸಕ್ಕೆ ಅಭ್ಯರ್ಥಿಗಳನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ 01 ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳಲಾಗುವುದು.
- ಸದರಿ ಕೆಲಸವು ಸಂಪೂರ್ಣ ತಾತ್ಕಾಲಿಕವಾಗಿದ್ದು, ನೇಮಕಗೊಂಡ ಅಭ್ಯರ್ಥಿಯು ಸದರಿ ಕೆಲಸದಲ್ಲಿ ಅವರನ್ನು ಖಾಯಂಗೊಳಿಸುವ ಯಾವುದೇ ಹಕ್ಕನ್ನು ಪ್ರತಿಪಾದಿಸಲು ಅವಕಾಶವಿರುವುದಿಲ್ಲ.

- ಪ್ರತಿ ದಿನ ಗರಿಷ್ಠ 03 ಗಂಟೆಗಳ ಅವಧಿಗೆ ಮೀರದಂತೆ ಕೆಲಸ ಮಾಡತಕ್ಕದ್ದು.
- ಸದರಿ ಕೆಲಸಕ್ಕೆ ನಿಗಧಿಗೊಳಿಸಿರುವ ಮಾಸಿಕ ಸಂಭಾವನೆಯು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿರ್ದೇಶಿಸಲ್ಪಟ್ಟಿದ್ದು, ಈ ಕುರಿತು ಸರ್ಕಾರದಿಂದ ಅಥವಾ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಮುಂದೆ ಹೊರಡಿಸಬಹುದಾದ ಮಾರ್ಗಸೂಚಿಗಳಿಗೆ ಅನುಸಾರ ಬದಲಾವಣೆಗೆ ಒಳಪಡುವಂತಹ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ನೇಮಕಗೊಂಡ ಅಭ್ಯರ್ಥಿಯು ಅಗತ್ಯಬಿದ್ದರೆ ಸಾರ್ವತ್ರಿಕ ರಜಾ ದಿನಗಳಲ್ಲೂ ಸಹ ಕಛೇರಿ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಬದ್ದರಾಗಿರತಕ್ಕದ್ದು.
- ನೇಮಕಗೊಂಡ ಅಭ್ಯರ್ಥಿಗಳು ತಮ್ಮ ಕರ್ತವ್ಯದಲ್ಲಿ ಸದಾ ಶಿಸ್ತುಬದ್ಧರಾಗಿರತಕ್ಕದ್ದು ಹಾಗೂ ಯಾವುದೇ ದುರ್ನಡತೆ, ಅಶಿಸ್ತು ತೋರಿದರೆ ಅಥವಾ ಹಣಕಾಸು ದುರುಪಯೋಗ ಮಾಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಶಿಕ್ಷೆಗೆ ಮತ್ತು ದಂಡನೆಗೆ ಗುರಿಪಡಿಸಲಾಗುವುದು ಹಾಗೂ ಯಾವುದೇ ನೊಟೀಸ್ ನೀಡದೇ ಕೆಲಸದಿಂದ ತೆಗೆದು ಹಾಕಲಾಗುವುದು.
- ಯಾವುದೇ ಕಾರಣಗಳಿಂದ ಅಭ್ಯರ್ಥಿಗಳು ತಮ್ಮ ಕೆಲಸವನ್ನು ತ್ಯಜಿಸಲು ಇಚ್ಛಿಸಿದರೆ ಆ ಕುರಿತು ಒಂದು ತಿಂಗಳ ಮುಂಚಿತವಾಗಿ ಪ್ರಾಧಿಕಾರಕ್ಕೆ ಮಾಹಿತಿ ನೀಡತಕ್ಕದ್ದು.
- ನೇಮಕಗೊಂಡ ಅಭ್ಯರ್ಥಿಗಳು ಸರ್ಕಾರ ವಿಧಿಸಿರುವ ನೀತಿ ನಿಯಮಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸತಕ್ಕದ್ದು.
- **ವಿಶೇಷ ಸೂಚನೆಃ**

ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ದೂರವಾಣಿ ಮುಖಾಂತರ ತಿಳಿಸಲಾಗುವುದು ಮತ್ತು ಸಂದರ್ಶನ ಪತ್ರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಮಗಳೂರು ಕಛೇರಿಗೆ ಖುದ್ದಾಗಿ ಬಂದು ತೆಗೆದುಕೊಳ್ಳತಕ್ಕದ್ದು.

ಗೌರವಾನ್ವಿತ ಅಧ್ಯಕ್ಷರು ಜಿ.ಕಾ.ಸೇ.ಪ್ರಾ. ಚಿಕ್ಕಮಗಳೂರು
ಇವರ ಆದೇಶದ ಮೇರೆಗೆ

ಸ್ಥಳಃ ಚಿಕ್ಕಮಗಳೂರು.

ದಿನಾಂಕಃ 06.03.2025

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸದಸ್ಯಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಚಿಕ್ಕಮಗಳೂರು.

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಿಕ್ಕಮಗಳೂರು

## ಅರ್ಜಿ ನಮೂನೆ

## ಹುದ್ದೆಯ ಹೆಸರುಃ ಸ್ಕ್ಯಾವೆಂಜರ್

ಪಾಸ್ ಪೋರ್ಟ್
ಅಳತೆಯುಳ್ಳ
ಭಾವಚಿತ್ರ
ಅಂಟಿಸುವುದು

| | |
|---|---|
| ಹೆಸರು | |
| ತಂದೆಯ ಹೆಸರು/<br>ಗಂಡನ ಹೆಸರು | |
| ವಯಸ್ಸು | |
| ವಿಳಾಸ | |
| ಮೊಬೈಲ್ ಸಂಖ್ಯೆ | |
| ಆಧಾರ್ ಕಾರ್ಡ್<br>(ಪ್ರತಿಯನ್ನು ಲಗತ್ತಿಸುವುದು) | |
| ಬ್ಯಾಂಕ್ ಖಾತೆ ಪುಸ್ತಕ<br>(ಪ್ರತಿಯನ್ನು ಲಗತ್ತಿಸುವುದು) | |

ಅರ್ಜಿದಾರರ ಸಹಿ